ದೂರುತ್ತಾರೆ. ನಗರ ಪಾಲಿಕೆಗೆ, ಪರಿಸರ ಇಲಾಖೆಗೆ ಶಾಪ ಹಾಕುತ್ತಾರೆ. ಆದರೆ, ನಾಗರಿಕರಾಗಿ ಕೆರೆಗಳ ಇಂದಿನ ಸ್ಥಿತಿಗೆ ನಮ್ಮ ಪಾಲೂ ಇದೆ ಎಂಬುದನ್ನು ಎಲ್ಲರೂ ಮರೆಯುತ್ತಾರೆ.

ಗಣೇಶ ಹಬ್ಬದ ದಿವಸ ಸಾವಿರಾರು ಮೂರ್ತಿಗಳನ್ನು ಕೆರೆಗಳಲ್ಲಿ ವಿಸರ್ಜಿಸಲಾಗುತ್ತದೆ. ಗಲ್ಲಿಗಲ್ಲಿಗಳಲ್ಲಿ ಇಟ್ಟಿರುವ ಗಣಪ ಹಬ್ಬ ಮುಗಿದ ಮೇಲೂ ಕೆರೆ ಸೇರುತ್ತಲೇ ಇರುತ್ತಾನೆ. ತಿಂಗಳ ಪೂರ್ತಿ ಈ ಕೆಲಸ ನಡೆಯುತ್ತಲೇ ಇರುತ್ತದೆ.

## ಅಪಾಯಕಾರಿ ಹೇಗೆ?



ಗಣೇಶನ ವಿಗ್ರಹಗಳನ್ನು ಕೆರೆಯಲ್ಲಿ ಮುಳುಗಿಸಿದಾಗ ವಿಗ್ರಹದ ರಾಸಾಯನಿಕ ಬಣ್ಣಗಳು ನೀರಿನಲ್ಲಿ ವಿಲೀನವಾಗದೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಮೂರ್ತಿಯ ಮಣ್ಣು ಕೆರೆಯಲ್ಲಿ ಈಗಾಗಲೇ ಇರುವ ಹೂಳಿನಲ್ಲಿ ಬೆರೆತು ಅದೂ ಕೆಡುತ್ತದೆ.

ಬಣ್ಣಗಳಲ್ಲಿರುವ ವಿಷಯುಕ್ತ ಪದಾರ್ಥಗಳು ಜಲಚರಗಳ ಸಾವಿಗೂ ಕಾರಣವಾಗುತ್ತವೆ. ಗಣೇಶನ ಮೂರ್ತಿಯ ಜೊತೆ ಹಣ್ಣು, ಹೂವಿನ ಹಾರಗಳು, ಬಣ್ಣದ ಪೇಪರ್‌ಗಳು ಹಾಗೂ ಇನ್ನಿತರ ಅಲಂಕಾರಿಕ ವಸ್ತುಗಳು ಕೆರೆಯನ್ನು ಸೇರಿ ಕಲ್ಮಶಕ್ಕೆ ಕಾರಣವಾಗುತ್ತದೆ.

ವಿವಿಧ ಬಣ್ಣದ ಗಣೇಶ ಮೂರ್ತಿಗಳು ನೀರಿಗೆ ಹಾಕಿದಾಗ ಕರಗುವುದೇ ಇಲ್ಲ. ನೆಲಜಲ ಅರಗಿಸಿಕೊಳ್ಳದ ಮೆಟ್ಯಾಲಿಕ್ ಪೈಂಟ್, ಡಿಸ್ಟೆಂಪರ್, ಕೃತಕ ಬಣ್ಣಗಳು (ಡೈ), ಹೊಳೆಯುವ ಬಣ್ಣಗಳು (ಫ್ಲೋರೋಸೆಂಟ್ ಕಲರ್), ಎನ್ಯಾಮಲ್ ಥಿನ್ನರ್, ವಾರ್ನಿಶ್, ತೈಲ ಮಿಶ್ರಿತ ವರ್ಣ, ಕ್ಯಾಡಿಯಂ, ಇಂಗಾಲ ಮತ್ತು ಪಾದರಸದಂಥ ಬಣ್ಣಗಳು ಅಪಾಯಕಾರಿ. ಇಂಥ ಗಣಪನನ್ನು ಪೂಜಿಸಿ ಕೆರೆಗೆ ಬಿಡುವುದರಿಂದ ನೀರಿನ ಗುಣಮಟ್ಟ ಕೆಡುತ್ತದೆ.

## ಪರಿಸರ ಗಣಪ ಪ್ರಖ್ಯಾತಿಗೆ

ಗಣೇಶ ಮೂರ್ತಿ ತಯಾರಕರು ಮತ್ತು ಮಾರಾಟಗಾರರು ಹೇಳುವಂತೆ, ನಾಲ್ಕೈದು ವರ್ಷಗಳಿಂದ ಪರಿಸರ ಪ್ರೇಮಿ ಗಣೇಶನಿಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಇಡೀ ಹಬ್ಬವೇ ಕಮರ್ಷಿಯಲ್ ಆಗಿರುವುದರಿಂದ, ಇಲ್ಲಿ ಎಲ್ಲವೂ ಕಲರ್‌ಫುಲ್ ಆಗಿರುವುದರಿಂದ ಒಂದೇ ನೋಟಕ್ಕೆ ಕಣ್ಸೆಳೆಯುವ ಮೂರ್ತಿಗಳೇ ಎಲ್ಲರಿಗೂ ಇಷ್ಟ. 'ಹಬ್ಬದವರೆಗೆ ಎಷ್ಟು ವ್ಯಾಪಾರವಾಯಿತೋ ಅಷ್ಟು ನಮಗೆ ಲಾಭ. ಬಣ್ಣವಿಲ್ಲದ ಮೂರ್ತಿಯನ್ನೇ ಕೊಳ್ಳಿ ಎಂದು ಒತ್ತಾಯಿಸಿದರೆ ಗ್ರಾಹಕರನ್ನು ಕಳೆದುಕೊಳ್ಳಬೇಕಾದೀತು' ಎನ್ನುವುದು ವ್ಯಾಪಾರಿಗಳ ವೇದನೆ. ಆದರೂ ಪರಿಸರ ಕಾಳಜಿ ನಿಟ್ಟಿನಲ್ಲಿ ಈಚೆಗೆ ಪರಿಚಯವಾದ ಬಣ್ಣರಹಿತ ಗಣೇಶ ಮೂರ್ತಿಗಳು ಬಹು ಜನಪ್ರಿಯ ಆಗುತ್ತಿವೆ.

**ಪರಿಸರ ರಕ್ಷಣೆ ಎಲ್ಲರ ಹೊಣೆ. ಗಣೇಶನ ಭಕ್ತರು ಗಮನ ಹರಿಸಬೇಕಾದ ಹಲವು ಸಂಗತಿಗಳಿವೆ.**

ಕಾಗದದಲ್ಲಿ ಗಣಪ ಅರಳಿಸಿದ ಮೈಸೂರಿನ ಕಲಾವಿದ ಎಸ್.ಎಫ್. ಹುಸೇನಿ.



★ ಕೋಕಲರ್ ಬಣ್ಣ ಹಾಕದ ಸಹಜ ಜೇಡಿ ಮಣ್ಣಿನಿಂದ ತಯಾರಿಸಿದ ಪುಟ್ಟ ಗಣಪನ ಖರೀದಿಗೆ ನಿಮ್ಮ ಆದ್ಯತೆ ಇರಲಿ.
★ ಅಲಂಕಾರ ಮಾಡಿದ ವಸ್ತುಗಳನ್ನು ಪ್ರತ್ಯೇಕಿಸಿ ನಿಗದಿತ ವಿಸರ್ಜನಾ ಪ್ರದೇಶದಲ್ಲಿ ವಿಸರ್ಜಿಸಿ; ಜಲಮೂಲಗಳನ್ನು ರಕ್ಷಿಸಿ.
★ ಖುಷಿ ಹಂಚಿಕೊಳ್ಳಲು ಪಟಾಕಿಯೇ ಬೇಕಾಗಿಲ್ಲ ಎಂದು ನಂಬಿದ್ದರೆ ಇನ್ನೂ ಉತ್ತಮ
★ ಸಂಭ್ರಮ ಸಂಕಟ ತರದಿರಲಿ; ಉತ್ಸವಾಚರಣೆಯ ಹೆಸರಲ್ಲಿ ನಿಸರ್ಗಕ್ಕೆ ಕೇಡಾಗದಿರಲಿ.
★ ಜಲಚರಗಳಿಗೆ ಹಾನಿ ಮಾಡಬೇಡಿ; ನೀರು ಕಲುಷಿತವಾಗದಂತೆ ನೋಡಿಕೊಳ್ಳಿ.
★ ಹತ್ತಾರು ಕಡೆ ಪೆಂಡಾಲ್ ಹಾಕುವ ಬದಲು ; ಪೈಪೋಟಿಗಾಗಿ ವಿಘ್ನೇಶ್ವರನ ಪೂಜೆ ಬೇಡ, ಒಂದು ಕಡೆ ಎಲ್ಲರೂ ಸೇರಿ ನಿಸರ್ಗಸ್ನೇಹಿ ಪದಾರ್ಥ ಬಳಸಿ, ಹಬ್ಬ ಆಚರಿಸಿ ಶತ್ರುತ್ವ ಮರೆಯಿರಿ, ಸೌಹಾರ್ದ ಮೆರೆಸಿರಿ.
★ ಸ್ಥಳೀಯ ಕಲಾ ಪ್ರತಿಭೆಗಳಿಗೆ ನೀಡಿ ಮನ್ನಣೆ; ಕನ್ನಡ ಗೀತೆಗಳಿಗಿರಲಿ ಆದ್ಯತೆ,
★ ಸಂಚಾರಿ ವಿಸರ್ಜನ ವಾಹನ ಲಭ್ಯವಿದ್ದಲ್ಲಿ ಅದರಲ್ಲೇ ವಿಸರ್ಜಿಸಿ. ವಿಸರ್ಜನೆಗೆ ಮೊದಲು ಮೂರ್ತಿಗೆ ಅಲಂಕಾರ ಮಾಡಿದ ಹೂವು ಮತ್ತಿತರ ಅಲಂಕಾರಿಕ ಸಾಮಗ್ರಿಗಳನ್ನು ಪ್ರತ್ಯೇಕಗೊಳಿಸಿ.
★ ಧ್ವನಿವರ್ಧಕಗಳಿಂದ ಬೇರೆಯವರಿಗೆ ತೊಂದರೆ ಕೊಡಬೇಡಿ. ವಿಸರ್ಜನೆಯಾದ ಒಂದು ವಾರದೊಳಗೆ ಕೆರೆ ಬಾವಿ, ಕೊಳ ಸ್ವಚ್ಛಗೊಳಿಸಬೇಕು.ಹೂಳು ಜಾಸ್ತಿ ಆಗದಂತೆ ತಡೆಯಲು ಗರಿಷ್ಠ ಎರಡು ಅಡಿಯಷ್ಟು ಎತ್ತರದ ಗಣೇಶನನ್ನು ಖರೀದಿಸಿದರೆ ಸಾಕು.